## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ. ನಂ. 2335/25**

ಚಾ.ಸಾ. 1

ಫ್ರಾ.ಸಾ. 1

ಸಾಕ್ಷಿದಾರರ ಹೆಸರು – ಶಿಲ್ಪಾ ನಾಯ್ಕ

ಗಂಡನ ಹೆಸರು – ಸುಭಾಷ್ ನಾಯ್ಕ

ವಯಸ್ಸು – 34 ವರ್ಷ

ಉದ್ಯೋಗ – ಗೃಹಿಣಿ

ವಾಸ್ತವ್ಯ – ಬಾಂಡಿಶಿಟ್ಟಾ, ಕಾರವಾರ ತಾಲೂಕ

(ಇಂದು ದಿನಾಂಕಃ 08-04-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ಆರೋಪಿ ನನ್ನ ಗಂಡನ ಅಣ್ಣನ ಮಗ. ಚಾ.ಸಾ.4 ನನ್ನ ಮಗಳು. ಆರೋಪಿ ನಮ್ಮೊಂದಿಗೆ ಯಾವುದೇ ಗಲಾಟೆ ಮಾಡಿಲ್ಲ, ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ. ಆರೋಪಿ ಮತ್ತು ನಮ್ಮ ಮಧ್ಯೆ ಬಾಯಿಮಾತಿನ ಚಕಮಕಿಯಾಗಿದ್ದು ಸಿಟ್ಟಿನಿಂದ ಆತನ ವಿರುದ್ಧ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ. ಅದೇ ಸಮಯದಲ್ಲಿ ಪೊಲೀಸ್ ಠಾಣೆಯಲ್ಲಿ ಇನ್ನೂ ಎರಡು ದಾಖಲಾತಿಗಳಿಗೆ ಸಹಿ ಹಾಕಿದ್ದೇನೆ. ಪ್ರಥಮ ವರ್ತಮಾನ ಹೇಳಿಕೆ, ಸ್ಥಳ ಪಂಚನಾಮೆ, ಕಚ್ಚಾ ನಕಾಶೆಗಳಲ್ಲಿರುವ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲಾತಿಗಳನ್ನು ಕ್ರಮವಾಗಿ ನಿ.ಪಿ.1 ರಿಂದ ನಿ.ಪಿ. 3 ಎಂದು, ಸಹಿಗಳನ್ನು ಕ್ರಮವಾಗಿ ನಿ.ಪಿ.1(ಎ) ದಿಂದ ನಿ.ಪಿ. 3(ಎ) ಎಂದು ಗುರುತಿಸಲಾಯಿತು. ನಿ.ಪಿ.1 ರಿಂದ ನಿ.ಪಿ.3 ದಾಖಲಾತಿಗಳಲ್ಲಿ ಇರುವ ವಿಷಯ ನನಗೆ ಗೊತ್ತಿಲ್ಲ. ಮರು ಹೇಳಿಕೆ ನೀಡಿಲ್ಲ. ನಾವು ಮತ್ತು ಆರೋಪಿ ರಾಜಿಯಾಗಿದ್ದೇವೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಹಿರಿಯ ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

ದಿನಾಂಕ 30-04-2025 ರಂದು ರಾತ್ರಿ 11.15 ಗಂಟೆ ಸಮಯದಲ್ಲಿ ನಾನು, ಚಾ.ಸಾ.4 ರವರು ಮನೆಯಲ್ಲಿದ್ದಾಗ ಆರೋಪಿ ಸಾರಾಯಿ ಕುಡಿದು ಬಂದು ಏಕಾಏಕಿ ಬಂದು ಚಾ.ಸಾ.4 ಇವರಿಗೆ ಇಲ್ಲಸಲ್ಲದ ಮಾತುಗಳಿಂದ ಬೈದು ಚಾ,ಸಾ.4 ರವರ ಕೆನ್ನೆಗೆ ಹೊಡೆದಿದ್ದಾನೆ ಎಂದರೆ ಸರಿಯಲ್ಲ. ನನ್ನನ್ನು ದೂಡಾಡಿದ್ದಾನೆ ಎಂದರೆ ಸರಿಯಲ್ಲ. ನಾನು ನಿ.ಪಿ.1 ರಂತೆ ಪ್ರಥಮ ವರ್ತಮಾನ ಹೇಳಿಕೆ ನೀಡಿದ್ದೇನೆ ಅನ್ನುವುದು ಸರಿಯಲ್ಲ.

ದಿನಾಂಕ 03-05-2025 ರಂದು ಮಧ್ಯಾಹ್ನ 12.30 ರಿಂದ 1.30 ಗಂಟೆ ಸಮಯದಲ್ಲಿ ನಾನು ತೋರಿಸಿದ ಸ್ಥಳದಲ್ಲಿ ಚಾ.ಸಾ.2 ಮತ್ತು ಚಾ.ಸಾ.3 ರವರ ಸಮಕ್ಷಮದಲ್ಲಿ ನಿ.ಪಿ.2 ರಂತೆ ಸ್ಥಳ ಪಂಚನಾಮೆಯನ್ನು ಪೊಲೀಸರು ಜರುಗಿಸಿದ್ದಾರೆ ಎಂದರೆ ಸರಿಯಲ್ಲ. ನಿ.ಪಿ.3 ರಂತೆ ಪೊಲೀಸರು ಕಚ್ಚಾ ನಕಾಶೆ ತಯಾರಿಸಿ ನನ್ನ ಸಹಿ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

ದಿನಾಂಕ 03-05-2025 ರಂದು ನಾನು ಪೊಲೀಸರ ಮುಂದೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಈಗ ನೀವು ------------- ಸಹಿ ಮಾಡಿರುತ್ತೇನೆ ಎಂದು ಈಗ ಓದಿ ಹೇಳಿದಂತೆ ಮರುಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಪಿ.4 ಎಂದು ಗುರುತಿಸಲಾಯಿತು. ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿ. ಆರೋಪಿ ನನ್ನ ಗಂಡನ ಸಹೋದರನ ಮಗನಾಗಿದ್ದರಿಂದ ಆತನಿಗೆ ಸಹಾಯ ಮಾಡಲು ಗಲಾಟೆ ನಡೆದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**
**ಮರು ವಿಚಾರಣೆಃ ಇಲ್ಲ.**
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ